**ದಿನಾಂಕಃ 05.12.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ಪ್ರತಿವಾದಿ ಪರ ವಕೀಲರಿಂದ**

ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಗೊತ್ತು. 1ನೇ ವಾದಿ ಸೈಯದ್ ಇಸ್ಮಾಯಿಲ್ ಷಾ ಖಾದ್ರಿ ನನ್ನ ಅಣ್ಣ ಇರುತ್ತಾರೆ. ನಾನು ಹುಟ್ಟಿ ಬೆಳೆದದ್ದು ಹೈದ್ರಾಬಾದಿನಲ್ಲಿ ಎಂದರೆ ಸರಿ. ಮೂಲತಃ ಹೈದರಾಬಾದಿನವರಲ್ಲ ಕೋಲರದವರಾಗಿರುತ್ತೇವೆ. ನಾನು ಜೀವನಕ್ಕೆ ಬಟ್ಟೆ ವ್ಯಾಪಾರ ಮಾಡುತ್ತೇನೆ ಎಂದರೆ ಸರಿ. ನನಗೆ ನಾಲ್ಕು ಜನ ಮಕ್ಕಳು. ನಾನು ಹಾಲಿ ಹೈದರಾಬಾದಿನ ತೆಲಂಗಾಣದಲ್ಲಿ ವಾಸವಿರುತ್ತೇನೆ ಎಂದರೆ ಸರಿ. ನಾನು ಕೋಲಾರ ಮತ್ತು ಹೈದರಾಬಾದ್ ಎರಡು ಕಡೆ ಹೋಗಿ ಬಂದು ಮಾಡುತ್ತೇನೆ. ಈ ವಾದ ಪತ್ರ ತಯಾರಿಸಲು ನನ್ನ ಅಣ್ಣ ಮಾಹಿತಿ ನೀಡಿರುತ್ತಾರೆ. ನನ್ನ ಅಣ್ಣ ಈ ಕೇಸಿನಲ್ಲಿ ನೀಡಿದ ಸಾಕ್ಷಿ ವಿಚಾರಣೆಯ ಬಗ್ಗೆ ತಿಳಿದುಕೊಂಡಿದ್ದೇನೆ. ನನ್ನ ತಾತ ಪೀರ್ ಸಯ್ಯದ್ ಅಮೀರ್ ಷಾ ಖಾದ್ರಿ ಅವರು ಕೋಲಾರದ ಉಪ್ ಕುಂಟಾದಲ್ಲಿದೆ. ನನ್ನ ತಾತನಿಗೆ 5 ಜನ ಮಕ್ಕಳು. ಸೈಯದ್ ರೆಹಮಾನ್ ಷಾ ಖಾದ್ರಿ, ಸೈಯದ್ ಷಪೀರ್ ಷಾ ಖಾದ್ರಿ, ಸೈಯದ್ ರಫೀಕ್ ಷಾ ಖಾದ್ರಿ, ಸೈಯದ್ ಆಲಿ ಷಾ ಖಾದ್ರಿ ಅಲಿಯಾಸ್ ಸೈಯದ್ ಜಾಂಗೀರ್ ಷಾ ಖಾದ್ರಿ, ಸೈಯದ್ ರಸೂಲ್ ಷಾ ಖಾದ್ರಿ.

ಪೀರ್ ಸೈಯದ್ ಅಮೀರ್ ಷಾ ಖಾದ್ರಿಯವರು ಸೈಯದ್ ಪೀರ್ ರಸೂಲ್ ಷಾ ಖಾದ್ರಿರವರ ದತ್ತು ತಂದೆ ಇರುತ್ತಾರೆ. ನಾನು ವಿದ್ಯಾಭ್ಯಾಸ ಮಾಡಿಲ್ಲ. ಪೀರ್ ರಸೂಲ್ ಷಾ ಖಾದ್ರಿರವರು ಅಮೀರ್ ಷಾ ಖಾದ್ರಿಯವರ ಶಿಷ್ಯ ಎಂದರೆ ಸರಿ. ಅಮೀರ್ ಷಾ ಖಾದ್ರಿಯವರ ಹತ್ತಿರ ರಸೂಲ್ ಷಾ ಖಾದ್ರಿರವರು ಕಿಲಾಫತ್ತು ತೆಗೆದುಕೊಂಡಿದ್ದಾರೆಂದರೆ ಸರಿ. ಕಿಲಾಫತ್ತು ತೆಗೆದುಕೊಂಡ ನಂತರ ರಸೂಲ್ ಷಾ ಖಾದ್ರಿರವರು ವಡಕೆಹಳ್ಳಕ್ಕೆ ಬಂದರು ಎಂದರೆ ಸರಿ. ನನ್ನ ತಂದೆಯ ಹೆಸರು ಷಫಿ ಖಾದ್ರಿ ಎಂದರೆ ಸರಿ. ನನ್ನ ತಂದೆಗೆ ಆರು ಜನ ಮಕ್ಕಳು. ನಮ್ಮ ತಂದೆಯ ಆರು ಜನ ಮಕ್ಕಳಲ್ಲಿ ಸೈಯದ್ ಇಬ್ರಾಹಿಂ ರವರು ದೊಡ್ಡವರು. 2ನೇಯವರು 1ನೇ ವಾದಿ ಎಂದು ಹೇಳುವುದು ಸರಿ. 3ನೇಯವನು ನಾನು ಎಂದರೆ ಸರಿ. ನಾಲ್ಕನೆಯವರು ಸೈಯದ್ ಮೋಹಿನ್ ಖಾದ್ರಿ ಇರುತ್ತಾರೆ. 5ನೇಯವರು ಸೈಯದ್ ದಸ್ತಗಿರಿ ಖಾದ್ರಿ, ಕೊನೆಯವರು ಸೈಯದ್ ಖಾದರ್ ಆಲಿ ಷಾ ಖಾದ್ರಿ.

ಈ ದಾವೆಯಲ್ಲಿ ಏನು ಪರಿಹಾರ ಕೇಳಿ ಹಾಕಿದ್ದೇನೆಂದು ತಿಳಿದುಕೊಂಡಿದ್ದೇನೆ. ನನ್ನ ವಾದ ಪತ್ರದಲ್ಲಿ ರಸೂಲ್ ಷಾ ಖಾದ್ರಿರವರು ಅಮೀರ್ ಷಾ ಖಾದ್ರಿಯವರ ದತ್ತುಮಗ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಪೀರ್ ಸೈಯದ್ ರಸೂಲ್ ಷಾ ಖಾದ್ರಿರವರು ಹೈದರಬಾದಿನವರು ಎಂದರೆ ಸರಿ. ನಮ್ಮ

ಬಾಲ್ಯದಿಂದ ಈವತ್ತಿನವರೆಗೂ ನನ್ನ ಅಣ್ಣ ತಮ್ಮಂದಿರು ಹೈದರಾಬಾದ್ ಮತ್ತು ಕೋಲಾರದಲ್ಲಿ ಇರುತ್ತೇವೆ ಎಂದರೆ ಸರಿ. ನನಗೆ 1ನೇ ಪ್ರತಿವಾದಿ ಗೊತ್ತು. 1ನೇ ಪ್ರತಿವಾದಿ ಸರ್ವೆ ನಂ. 42 ರಲ್ಲಿ ನಾಲ್ಕು ಎಕರೆಯನ್ನು ಪೀರ್ ಸೈಯದ್ ರಸೂಲ್ ಷಾ ಖಾದ್ರಿರವರಿಗೆ ನೋಂದಾಯಿತ ದಾನಪತ್ರದ ಮೂಲಕ ದಾನ ಮಾಡಿರುತ್ತಾರೆ ಎಂದರೆ ಸರಿ. ಯಾಕೆ ದಾನ ಮಾಡಿದರೆಂದು ನಾನು ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತಿನ ಸರ್ವೆ ನಂಬರುಗಳು ನನಗೆ ಜ್ಞಾಪಕ ಇಲ್ಲ. ಸರ್ವೆ ನಂ. 42 ರಲ್ಲಿ ನಾಲ್ಕು ಎಕರೆ ದಾನ ಮಾಡಿದ ನಂತರ ಉಳಿದ ನಾಲ್ಕು ಎಕರೆಯನ್ನು 2 ರಿಂದ 9ನೇ ಪ್ರತಿವಾದಿಗಳು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಕ್ರಯವಾಗುವಾಗ ನನಗೆ 13 ವರ್ಷ ಎಂದರೆ ಸರಿ. ಕ್ರಯವಾಗುವಾಗ ಯಾರು ಹಣ ಕೊಟ್ಟಿದ್ದಾರೆ ಮತ್ತು ಏನು ವ್ಯವಹಾರವಾಗಿದೆ ಎಂದು ನನಗೆ ಗೊತ್ತು. ಕ್ರಯದ ವ್ಯವಹಾರದ ಮಧ್ಯಸ್ಥಿಕೆಯನ್ನು ಯಾರು ವಹಿಸಿದ್ದರು ಎಂದು ನನಗೆ ಗೊತ್ತಿಲ್ಲ. ಒಂದು ಲಕ್ಷ ಹಣಕ್ಕೆ ಕ್ರಯವಾಗಿದೆ. 1998 ರಲ್ಲಿ ಕ್ರಯವಾಗಿರುತ್ತದೆ.

ಪೀರ್ ರಸೂಲ್ ಷಾ ಖಾದ್ರಿರವರು ಅವರ ಜೀವಿತ ಕಾಲದಲ್ಲಿ ಒಂದು ವಿಲ್ ಮಾಡಿದ್ದಾರೆ. ಈ ಕೇಸು ದಾಖಲು ಮಾಡುವಾಗ ಸದರಿ ವಿಲ್ಲಿನ ಬಗ್ಗೆ ನನಗೆ ಮಾಹಿತಿ ಇತ್ತು. ಈ ದಾವೆಯಲ್ಲಿ ನಾನಾಗಲೀ 1ನೇ ವಾದಿಯಾಗಲೀ ವಿಲ್ಲಿನ ಬಗ್ಗೆ ಪ್ರಸ್ತಾಪ ಮಾಡಿಲ್ಲ ಎಂದರೆ ಸರಿಯಲ್ಲ. ವಿಲ್ಲಿನ ಬಗ್ಗೆ ನನಗೆ ಯಾವಾಗ ಮಾಹಿತಿ ಲಭ್ಯವಾಯಿತೆಂದು ಹೇಳಲು ನೆನಪಿರುವುದಿಲ್ಲ. ಯಾವ ವರ್ಷದಲ್ಲಿ ವಿಲ್ ಸಿಕ್ಕಿತು ಎಂದು ಹೇಳಲಾಗುವುದಿಲ್ಲ. ಸದರಿ ವಿಲ್ ಯಾವಾಗ ಮಿಸ್ ಆಯಿತೆಂದು ನನಗೆ ಗೊತ್ತಿಲ್ಲ. ಗುಮ್ ನಾಮ್ ಷಾ ವಲಿ ವಕ್ಫ್ ಕಂಟ್ರೋಲ್ ನಲ್ಲಿದೆ ಎಂದರೆ ಸರಿ. ಗುಮ್ ನಾಮ್ ಷಾ ವಲಿ ಯಲ್ಲಿ ಒಂದು ಕಮಿಟಿ ಇದೆ ಎಂದರೆ ಸರಿ. ಸಾಕ್ಷಿಯು ನಮ್ಮ ಕಮಿಟಿ ಕೂಡ ಇದೆ ಎಂದು ಉತ್ತರಿಸುತ್ತಾರೆ. ಸದರಿ ಕಮಿಟಿಯನ್ನು ವಕ್ಫ್ ಬೋರ್ಡ್ ಮಾಡಿದೆ ಎಂದರೆ ಸರಿ. ಗುಮ್ ನಾಮ್ ಷಾ ದರ್ಗಾದ ಮೇಲೆ ನಮ್ಮ ಕುಟುಂಬದವರಿಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ಗುಮ್ ನಾಮ್ ಷಾ ದರ್ಗಾದ ಮೇಲೆ ನಮ್ಮ ಕುಟುಂಬದವರಿಗೆ ಹಕ್ಕಿದೆ ಎಂದು ನಾನು ಹೇಳಿದ್ದು ಆ ಬಗ್ಗೆ ದಾಖಲೆ ಇರುವುದಿಲ್ಲ. ಸದರಿ ವಿಲ್ ಯಾವ ದಿನಾಂಕದಂದು ಆಯಿತೆಂದು ನನಗೆ ಗೊತ್ತಿಲ್ಲ. ಸದರಿ ವಿಲ್ ಕನ್ನಡ ಭಾಷೆಯಲ್ಲಿದೆ. ಆ ವಿಲ್ಲನ್ನು ನಾನು ನೋಡಿದ್ದೇನೆ. ಎಂ ಎಂ ಹಿಲ್ಸ್ ನ ಬುದ್ದಿ ಎಂಬುವವರು ಸದರಿ ವಿಲ್ಲಿಗೆ ಸಾಕ್ಷಿಯಾಗಿರುತ್ತಾರೆ. ಸದರಿ ವಿಚಾರವನ್ನು ನನಗೆ ನನ್ನ ಚಿಕ್ಕಪ್ಪ ಸೈಯದ್ ರಸೂಲ್ ಷಾ ಖಾದ್ರಿಯವರು ಹೇಳಿರುತ್ತಾರೆ. ಸದರಿ ವಿಲ್ ನಾವೆಯನ್ನು ಎಷ್ಟು ರೂಪಾಯಿಯ ಸ್ಟಾಂಪ್ ಪೇಪರಿನಲ್ಲಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಬುದ್ದಿಯವರು ವಡಕೆಹಳ್ಳಕ್ಕೆ ಬಂದು ವಿಲ್ಲಿಗೆ ತನ್ನ ಹೆಬ್ಬೆಟ್ಟು ಹಾಕಿರುತ್ತಾರೆ. ಸದರಿ ವಿಲ್ಲಿಗೆ ಬೇರೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ವಿಲ್ಲನ್ನು ಓದಿಸಿ ತಿಳಿದುಕೊಂಡಿರುವುದಿಲ್ಲ. ಪೀರ್ ಸೈಯದ್ ರಸೂಲ್ ಷಾ ಖಾದ್ರಿರವರು ಅವರ ಜೀವಿತ

ಕಾಲದಲ್ಲಿ ಯಾವುದೇ ವಿಲ್ ಮಾಡಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ವಿಚಾರಣೆ ನಡೆಯುವ ಸಮಯದಲ್ಲಿ ವಿಲ್ಲನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಹಿಂದಿನ ವಕೀಲರು ವಿಲ್ ನಾಮೆಯನ್ನು ಸೃಷ್ಟಿ ಮಾಡಿದ್ದಾರೆ ಎಂದು ಹೇಳುವುದು ಸುಳ್ಳು. ಈ ದಾವೆಯನ್ನು ಟ್ರಸ್ಟಿನ ವಿರುದ್ಧ ಸಲ್ಲಿಸಿಲ್ಲ ವ್ಯಕ್ತಿಗಳ ಮೇಲೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಪೀರ್ ಸೈಯದ್ ರಸೂಲ್ ಷಾ ಖಾದ್ರಿ ರಿಲಿಜಿಯಸ್ ಅಂಡ್ ಚಾರಿಟಬಲ್ ವೆಲ್ ಪೇರ್ ಟ್ರಸ್ಟನ್ನು ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಓ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.